## ಭೂಸ್ವಾಧೀನ ಕಾಯ್ದೆಯ ಕಲಂ 19(1) ರೊಂದಿಗೆ ಓದಲಾದ ಪ್ರಕರಣ 19(2) ಅನ್ವಯ ಘೋಷಣೆ

ಸಂ: ಕಂಇ/ಭೂಸ್ವಾ/ಬಿಎ/[illegible]-85/16-17/ ದಿನಾಂಕ: 20.3.18

ಭಾರತ ಸರಕಾರವು "The Right to Fair Compensation and Transparency in Land Acquisition, Rehabilitation & Resettlement Act 2013"ನ್ನು ದಿನಾಂಕ: 01-01-2014 ರಂದು ಜಾರಿಗೆ ಬಂದಿರುವುದರಿಂದ ಈ ಹಿಂದಿನ ಭೂಸ್ವಾಧೀನ ಕಾಯ್ದೆ 1894 ನಿರಸನಗೊಂಡಿರುತ್ತದೆ. ಭೂಸ್ವಾಧೀನ ಅಧಿನಿಯಮ (2013ನೇ ಕೇಂದ್ರ ಅಧಿನಿಯಮ) ಪ್ರಕಟಣೆ 19ರ ಅನ್ವಯ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ **ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಚಾಲಿಕಟ್ಟಿ ಗ್ರಾಮದಲ್ಲಿ ಶಿಗ್ಗಾಂವ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ತುಂತುರು ನೀರಾವರಿಗೆ ಸಂಬಂಧಿಸಿದಂತೆ ಸಂಪ್ ಮತ್ತು ಪಂಪ್‌ಹೌಸ್** ನಿರ್ಮಾಣಕ್ಕಾಗಿ ಕುರಿತು ಬೇಕಾಗುವದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಜಿ) ಖಂಡದ ಮೇರೆಗೆ **ವಿಶೇಷ ಭೂಸ್ವಾಧೀನಾಧಿಕಾರಿಗಳು, ಮಲಪ್ರಭಾ ಯೋಜನೆ-3, ಬಾಗಲಕೋಟ** ಇವರನ್ನು ಸದರಿ ಜಮೀನಿನಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲು **ಜಿಲ್ಲಾಧಿಕಾರಿಯವರ** ಪ್ರಕಾರ ಈ ಕಾರ್ಯಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯಮಿಸಲಾಗಿದೆ. ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ ಪ್ರಕರಣ 20ರ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮದ ಅನುಸೂಚಿ-2ರ ಮತ್ತು ಕಲಂ 31ರ ರನ್ವಯ ಪುನರ್‌ವಸತಿ ಹಾಗೂ ಪುನರ್ ವ್ಯವಸ್ಥೆಯ ಐತೀರ್ಪು ರಚಿಸಲಾಗುವುದು ಎಂದು ಉದ್ದೇಶಿಸಲಾಗಿದೆ.

19(1)ರ ಅಡಿಯಲ್ಲಿ ಸೂಚಿಸಿದಂತೆ 15(2)ರನ್ವಯ 15(1)ರ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗೆ ಸಂಬಂದಿಸಿದಂತೆ ಮಾನ್ಯ ಆಯುಕ್ತರು, ಪುನರ್‌ವಸತಿ , ಪುನರ್‌ನಿರ್ಮಾಣ ಮತ್ತು ಭೂಸ್ವಾಧೀನ ಕೃಷ್ಣಾ ಮೇಲ್ದಂಡೆ ಯೋಜನೆ ನವನಗರ ಬಾಗಲಕೋಟ ಇವರಿಂದ ದಿ: **24-01-2017** ರಂದು ಒಪ್ಪಿಗೆಯನ್ನು ಪಡೆಯಲಾಗಿರುತ್ತದೆ.

ಸದರಿ ಅಧಿನಿಯಮ ಕಲಂ.18 ರನ್ವಯ ಪುನರ್‌ವಸತಿ, ಪುನರ್ ವ್ಯವಸ್ಥೆಯ ಸಾರಾಂಶದ ಅನುಮೋದಿತ ಕರಡು ಯಾದಿಯನ್ನು ಕಲಂ 19(2) ರನ್ವಯ ಘೋಷಿಸಲಾಗಿದೆ.

ಸದರಿ ಅಧಿನಿಯಮ 21ನೇ ಪ್ರಕರಣ ಉಪ ಪ್ರಕರಣ (1)ರಲ್ಲಿ ಪ್ರಕಟಿಸಲಾದ ಈ ನೋಟಿಸಿನ ಪ್ರಕಟಣೆ ನಂತರ ಭೂಮಿ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸರಕಾರವು ಉದ್ದೇಶಿಸಿದೆ.

ಸದರಿ ಜಮೀನಿನ ವಿವರವನ್ನು ಸೂಚಿಸುವ ಒಂದು ನಕಾಶೆಯನ್ನು ಆಸಕ್ತಿ ಜನರ ಅವಗಾಹಣೆಗಾಗಿ **ವಿಶೇಷ ಭೂಸ್ವಾಧೀನಾಧಿಕಾರಿಗಳು, ಮಲಪ್ರಭಾ ಯೋಜನೆ-3, ಬಾಗಲಕೋಟ** ಇವರ ಕಛೇರಿಯಲ್ಲಿ ಇಡಲಾಗಿದೆ.

## ಅನುಸೂಚಿ

ಜಿಲ್ಲೆ: ಹಾವೇರಿ ತಾಲೂಕ: ಶಿಗ್ಗಾಂವ ಗ್ರಾಮ: ಜಾಲಿಕಟ್ಟಿ

ನಂ:ಎಲ್ಎಕ್ಯೂ:ಎಸ್ಆರ್: 06/14-15

| ಅ ನಂ | ಖಾತೆದಾರ ಹೆಸರು | ಅನುಭವದಾರರ ಹೆಸರುಗಳು | ಸರ್ವೆ ನಂ | ಜಮೀನಿನ ತರಹೆ | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | ಭೂಸ್ವಾಧೀನ ಪಡೆಯುವ ಕ್ಷೇತ್ರ ಎ ಗುಂ | ಆಕಾರ ರೂಪೈ | ಬಾವಿ ಕಟ್ಟಡ ಗಿಡ ಮರ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 1) ಕಡಕೋಳ ಹಾದಿಬಸಪ್ಪ ಬಸಪ್ಪ<br>2) ಶಿವಪ್ಪ ಬಸಪ್ಪ | ಸ ನಂ. 27/1 ಕ್ಕೆ ದಾರಿ ಹಕ್ಕು ಇದೆ.<br>(163)(21)(452)(36)(85)(96)<br>(131)(132)(214)(219) | 27/3ಅ+3ಬ | ಖುಷ್ಕಿ | 29 | 32 | 26 | 35 | 00-15-00 | 1 | - |
| | ಒಟ್ಟು ಕ್ಷೇತ್ರ | | | | | | | | 00-15-00 | | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಿವಯೋಗಿ ಸಿ. ಕಳಸದ)
ಆಯುಕ್ತರು,
ಪುನರವಸತಿ, ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ
ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು
ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ

PRNO-277

(ದಿನೇಶ್ ಕುಮಾರ್. G.T.) KAS
ವಿಶೇಷ ಭೂಸ್ವಾಧೀನಾಧಿಕಾರಿಗಳು,
ಮಲಪ್ರಭಾ ಯೋಜನೆ-3, ಬಾಗಲಕೋಟ